ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ: 1783-2013

ಚಾಸಾ : 4 ಪ್ರಾಸಾ : 4

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು

ದಿನಾಂಕ: 06-09-2016

ವಾಗ್ಮೂಲದವರ ಹೆಸರು : ಮೋಹನ ರಾವ್
ತಂದೆ ಹೆಸರು : ಭಾಸ್ಕರ ರಾವ್
ವಯಸ್ಸು : 46 ವರ್ಷ
ಉದ್ಯೋಗ : ಲೈನ್‌ಸೇಲ್ಸ್
ವಾಸಸ್ಥ ಳ : ಕೋಟೇಶ್ವರ

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ:

ದಿ.28.11.2012ರಂದು ಕೋಟೇಶ್ವರ ಕಾಗೇರಿ ಎಂಬಲ್ಲಿ ಮಂಜುನಾಥ ಪೂಜಾರಿಯವರ ಮನೆಯ ಹಿಂದೆ ಚಾ.ಸಾ.1ರವರ ಚಿನ್ನದ ಸರ ಕಳುವಾದ ಬಗ್ಗೆ ಅಲ್ಲಿಗೆ ಬಂದ ಪೋಲೀಸರು ಸ್ಥಳವನ್ನು ಪರಿಶೀಲಿಸಿ ಸಂಜೆ 4.00ರಿಂದ 5.00ಗಂಟೆವರೆಗೆ ಪಂಚನಾಮೆಯನ್ನು ಮತ್ತು ನಕಾಶೆಯನ್ನು ಮಾಡಿರುತ್ತಾರೆ. ಸದ್ರಿ ದಾಖಲೆಗಳಿಗೆ ನಾನು ಸಹಿ ಮಾಡಿರುತ್ತೇನೆ. ನಿ.ಪಿ.2 ಮತ್ತು ನಿಪಿ.3ರಲ್ಲಿ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿ.ಪಿ.2(ಬಿ) ಮತ್ತು ನಿ.ಪಿ.3(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲು: 2ರಿಂದ 4ನೇ ಆರೋಪಿತರ ಪರವಾಗಿ ಶ್ರೀ ಜೆ ಪಿ ಎಸ್ ವಕೀಲರಿಂದ:

2. ಆ ಸಮಯದಲ್ಲಿ ಅಲ್ಲಿ ಸುತ್ತಮುತ್ತಲಿನ ಸಾಕಷ್ಟು ಜನರು ಸೇರಿದ್ದರು. ನಾನು ಅಲ್ಲಿಗೆ 3.00ಗಂಟೆಗೆ ಹೋಗಿದ್ದೆನು. ಆ ಸಮಯದಲ್ಲಿ ಸಹ ಸಾಕಷ್ಟು ಜನರು ಬಂದಿದ್ದರು. ಅಲ್ಲಿ ಎಷ್ಟು ಜನ ಪೋಲೀಸರು ಬಂದಿದ್ದರು ಎಂದು ನೆನಪಿಲ್ಲ. ಪೋಲೀಸರು ಅಲ್ಲಿಗೆ ಮಧ್ಯಾಹ್ನ 3.30ಗಂಟೆಗೆ ಬಂದಿರುತ್ತಾರೆ. ಅವರು ಯಾವ ವಾಹನದಲ್ಲಿ ಬಂದಿರುತ್ತಾರೆ ಎಂದು ಗೊತ್ತಿಲ್ಲ. ಘಟನಾ ಸ್ಥಳವನ್ನು ಪೋಲೀಸರಿಗೆ ಯಾರು ತೋರಿಸಿದರು ಎಂದುನನಗೆ

ಗೊತ್ತಿಲ್ಲ. ನಾನು ಸಹಿ ಮಾಡಿದ ಮಹಜರು ಎಷ್ಟು ಪುಟ ಇತ್ತು ಎಂದು ನನಗೆ ಗೊತ್ತಿಲ್ಲ. ಸದ್ರಿ ಮಹಜರಿಗೆ ಇಬ್ಬರು ಸಹಿ ಮಾಡಿರುತ್ತಾರೆ. ಅಲ್ಲಿದ್ದ ಸ್ಥಳೀಯರೆಲ್ಲಾ ಆ ಮಹಜರಿಗೆ ಸಹಿ ಮಾಡಿರುವುದಿಲ್ಲ. ಅವರಿಗೆ ಪೋಲೀಸರು ಸಹಿ ಮೂಡಲು ಹೇಳಿದ ಬಗ್ಗೆ ನನಗೆ ನೆನಪಿಲ್ಲ. ಚಾ.ಸಾ.1ರವರು ನನ್ನ ಪಕ್ಕದ ಮನೆಯವರು. ನಾನು ಸ್ಥಳದಲ್ಲಿ ಒಟ್ಟು ಎಷ್ಟು ಸಹಿ ಮಾಡಿದ್ದೇನೆ ಎಂದುನೆನಪಿಲ್ಲ. ಪೋಲೀಸರು ನಾನು ಸಹಿ ಮಾಡಿದ ನಂತರ ಹೋಗಿರುತ್ತಾರೆ. ಅಲ್ಲಿ ನಕಾಶೆಯನ್ನು ಬರೆದಿರುತ್ತಾರೆ. ಸದ್ರಿ ನಕಾಶೆಯನ್ನು ಬರೆದಾಗ ಎಷ್ಟು ಸಮಯ ಆಗಿತ್ತು ಎಂದು ನನಗೆ ಹೇಳಲಾಗುವುದಿಲ್ಲ. ಅದನ್ನು ಯಾರು ಬರೆದಿದ್ದಾರೆ ಎಂದು ಸಹ ನನಗೆ ಹೇಳಲಾಗುವುದಿಲ್ಲ. ಪೋಲೀಸರು ನನ್ನ ಸಮಕ್ಷಮ ಆ ಸ್ಥಳದಲ್ಲಿ ಯಾವುದೇ ಮಹಜರು ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಚಾ.ಸಾ.1 ನನಗೆ ಬೇಕಾದವರಾದ ಕಾರಣ ಅವರಿಗೆ ಸಹಾಯ ಮಾಡಲು ನಾನುಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರನ್ನು ಠಾಣೆಯಲ್ಲಿಯೇ ತಯಾರಿಸಿದ ಕಾರಣ ಸ್ಥಳೀಕರ ಸಹಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ .

ಪಾಟೀ ಸವಾಲುಃ 1ನೇ ಆರೋಪಿ ಪರವಾಗಿ ವಕೀಲರು ಮೇಲ್ಕಂಡ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.